



ಅರುಣ ಪಿ. ಭಟ್ಟ

## ವಾರಭವಿಷ್ಯ: 3.3.2022ರಿಂದ 09.03.2022ರವರೆಗೆ




ಬಹುದಿನದಿಂದ ನಿರೀಕ್ಷಿಸಿದ ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನಿರೀಕ್ಷಿತ ಲಾಭವಿದೆ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ವಾರಾಂತ್ಯದಲ್ಲಿ ಅನಿರೀಕ್ಷಿತವಾಗಿ ಜನರ ವಿರೋಧವನ್ನು ಎದುರಿಸಬೇಕಾಗುತ್ತದೆ. ನಿಮ್ಮ ಕೆಲಸದಲ್ಲಿ ಜಾಗ್ರತೆ ಅಗತ್ಯ. ಶುಭದಿನ 05. ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆಯನ್ನು ಅಗತ್ಯವಾಗಿ ತೆಗೆದುಕೊಳ್ಳಬೇಕು. ಬಹುದಿನದ ಸಾಮಾಜಿಕ ಸ್ಥಾನಮಾನದಲ್ಲಿ ಪ್ರಗತಿ ಸಾಧಿಸುವಿರಿ. ಲೇಖಕರಿಗೆ ಶುಭವಾರ್ತೆ ಆರೋಗ್ಯ ಸುಧಾರಣೆ. ವಿವಾಹಾಪೇಕ್ಷಿಗಳಿಗೆ ಉತ್ತಮ ಅವಕಾಶ. ಹೊಸಮನೆ ಕೆಲಸಗಳು ಅಬಾಧಿತವಾಗಿ ನಡೆಯುತ್ತವೆ. ವಾರಾಂತ್ಯದಲ್ಲಿ ಹೊಸ ಕೆಲಸದ ಬಗ್ಗೆ ಆಲೋಚನೆ. ಶುಭದಿನ 04. ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನೆಂಟರ ಆಗಮನದಿಂದ ಮಹತ್ವದ ಚರ್ಚೆ ಫಲಪ್ರದವಾಗುತ್ತದೆ. ಸಹೋದರ ನೈಜಮುಖದ ಪರಿಚಯವಾಗುವುದು. ಕೆಲಸದವರಿಂದ ಸಹಾಯ ಸಿಗಲಿದೆ. ಆಸ್ತಿ–ಪಾಸ್ತಿ ಖರೀದಿಯಲ್ಲಿ ನಿರೀಕ್ಷಿತ ಲಾಭ ಸಿಗಲಿದೆ. ವಾರಾಂತ್ಯದಲ್ಲಿ ಬಂಧುವರ್ಗದಿಂದ ನೆರವು. ಶುಭದಿನ 09. ನಾಗ ಪ್ರತಿಮಾ ಪೂಜೆ ಮಾಡಿರಿ.




ಅನಪೇಕ್ಷಿತ ಜನರ ಪ್ರವೇಶದಿಂದ ನಿಮ್ಮ ಕುಟುಂಬದಲ್ಲಿ ಕಿರಿಕಿರಿ ಉಂಟಾಗುತ್ತದೆ. ತಂದೆಯೊಡನೆ ಮನಸ್ತಾಪ ಆಗುವ ಸಾಧ್ಯತೆಯಿದೆ ಎಚ್ಚರ ತೆಗೆದುಕೊಳ್ಳುವುದು ಒಳ್ಳೆಯದು. ವಾಹನ ದುರಸ್ತಿ ಕಾರ್ಯ ಇಲ್ಲವೆ ಹೊಸ ವಾಹನ ಖರಿಸುವ ಯೋಗ ಇದೆ. ಕೃಷಿಮೂಲದಿಂದ ಧನಲಾಭ. ಸಾಮಾಜಿಕ ಕಾರ್ಯಗಳ ಯಶಸ್ಸು ನಿಮಗೆ ಒಳ್ಳೆಯ ಹೆಸರನ್ನು ಕಲ್ಪಿಸುತ್ತದೆ. ಶುಭದಿನ 07. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆ ಜರುಗುವುದು. ಹೊಟ್ಟೆ ನೋವಿನ ಉಪದ್ರ ಕಾಣಿಸಲಿದ್ದು ಸ್ವಲ್ಪ ದೀರ್ಘಕಾಲ ಕಾಡಲಿದೆ. ಆಕಸ್ಮಿಕವಾಗಿ ಅವಮಾನಕರ ಪ್ರಸಂಗ ಎದುರಾಗಬಹುದು. ಮಾನಸಿಕ ಆರೋಗ್ಯ ಚೆನ್ನಾಗಿರುವುದು. ನಿಮ್ಮ ಮಲಿನ ಅಧಿಕಾರಿಗಳಿಂದ ನಿಮ್ಮ ಕೆಲಸಕ್ಕೆ ಪ್ರಶಂಸೆ ವ್ಯಕ್ತವಾಗಲಿದೆ. ಶುಭದಿನ 04. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಹಲವು ಖರ್ಚುಗಳು ಮೇಳೈಸಿ ಬರುವುದರಿಂದ ಆರ್ಥಿಕವಾಗಿ ಚಿಂತೆ ಉಂಟಾಗುತ್ತದೆ. ಅನೀರಿಕ್ಷಿತ ಪ್ರವಾಸ ಕೈಗೊಳ್ಳುವ ಸಾಧ್ಯತೆ ಇದೆ. ವಿವಾಹ ಕಾರ್ಯಕ್ಕೆ ನೆರವಾಗುವದರಿಂದ ಸಂತಸ ಪ್ರಾಪ್ತಿಯಾಗಲಿದೆ. ಕೆಲಸದವರು ಕೈಕೊಡಬಹುದು, ಇದು ನಿಮ್ಮನ್ನು ಕಾಡಲಿದೆ. ಕೌಟುಂಬಿಕ ಸುವಾರ್ತೆಯನ್ನು ಕೇಳಿ ಸಂತಸವನ್ನು ಹಂಚಿಕೊಳ್ಳಲಿದ್ದೀರಿ. ಶುಭದಿನ 06. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ಎಲ್ಲ ಮೂಲಗಳಿಂದ ಧನಲಾಭ ಪ್ರಾಪ್ತವಾಗಲಿದೆ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ ನಿಮಗೆ ಹತ್ತಿರವಾಗಲಿದೆ. ಹಳೆಯ ಮಿತ್ರರು ಜೊತೆಯಾಗುವರು. ಸಂತಸದ ಸಮಾರಂಭಕ್ಕಾಗಿ ಅಧಿಕ ಖರ್ಚು ಮಾಡಲಿದ್ದೀರಿ. ಸಂತಾನ ಪ್ರಾಪ್ತಿ ನಿರೀಕ್ಷಿಸುವ ಹೊಸ ವಿವಾಹಿತರಿಗೆ ಶುಭ ಸುದ್ದಿ ಸಿಗಲಿದೆ. ಶುಭದಿನ 05. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ಪ್ರಾಪ್ತಿಯಿಂದ ಸಂತಸ ಉಂಟಾಗುತ್ತದೆ. ಬಂಧುಬಳಗ, ಆಪ್ತವಲಯದಿಂದ ಅಭಿನಂದನೆಯನ್ನು ತೆಗೆದುಕೊಳ್ಳಲಿದ್ದೀರಿ. ವಿಶೇಷ ವಸ್ತ್ರ ಖರೀದಿ ಸಾಧ್ಯತೆ ಇದೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ಚಿಕ್ಕ ಪ್ರವಾಸದಿಂದ ಮನೋಲ್ಲಾಸ ಉಂಟಾಗುತ್ತದೆ. ಶುಭದಿನ 04. ಶನಿಸ್ತೊತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟದ ಸಂದರ್ಭದಿಂದ ಮುಕ್ತಿ ಸಿಗಲಿದೆ. ಸಂಕಷ್ಟದಿಂದ ನಿರಾಳವಾಗಿ ಮಂದಹಾಸ ಮೂಡಲಿದೆ. ಪತ್ನಿಯ ಮನೋಕಾಮನೆ ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ ಮಾಡಲಿದ್ದೀರಿ. ನಾಗರಿಕರಿಂದ ಪ್ರಶಂಸೆ ನುಡಿ. ನಾಗರಿಕ ಸನ್ಮಾನ. ಸರಕಾರಿ ನೌಕರರಿಗೆ ವರ್ಗಾವಣೆ ಸಾಧ್ಯತೆ ಇದೆ. ಶುಭದಿನ 05. ಕಾಲಭೈರವನ ಸೇವೆ ಮಾಡಿರಿ.




ಹಲವು ತಾಪತ್ರಯಗಳ ನಡುವೆಯೂ ಹಮ್ಮಿಕೊಂಡ ಕಾರ್ಯವನ್ನು ಮಾಡಿ ಮುಗಿಸುವಿರಿ. ಇದರ ಯಶಸ್ಸು ನಿಮ್ಮನ್ನು ವಿರೋಧಿಸುತ್ತಿದ್ದವರ ಮನದಲ್ಲೂ ಕೂಡಾ ಸಂತಸ ಸಂಭ್ರಮವನ್ನು ಉಂಟುಮಾಡುತ್ತದೆ. ಸಹನೆಯಿಂದ ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಹಾಗಾಗಿ ಬರಬೇಕಾಗಿದ್ದ ಹಣವು ಶೀಘ್ರದಲ್ಲಿ ದೊರೆಯುವುದು. ಶುಭದಿನ 03. ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಕೇವಲ ಒಂದೇ ಒಂದು ಉತ್ತಮ ಕೆಲಸದಿಂದ ನಿಮ್ಮ ಶತ್ರುಗಳು ನಿಮ್ಮ ಸ್ನೇಹಿತರಾಗಬಹುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ. ಅಚ್ಚರಿಯ ಕೊಡುಗೆಯೂ ನಿಮಗೆ ಸಿಗಬಹುದು. ನಿಮ್ಮ ಸಂಗಾತಿ ನಿಮ್ಮ ಒಂದು ಯೋಜನೆಯನ್ನು ಹಾಳುಮಾಡಬಹುದು. ಶುಭದಿನ 05. ಹನುಮಾನ್ ಚಾಲೀಸ್ ಓದಿರಿ.




ನಿಮ್ಮ ವೃತ್ತಿ ಜೀವನದ ಬಗ್ಗೆ ಸಾಕಷ್ಟು ಗಂಭೀರವಾಗಿ ಕೆಲಸ ಮಾಡುವಿರಿ ಮತ್ತು ಏನಾದರೂ ವಿಶೇಷವಾದುದನ್ನು ಸಾಧಿಸುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಆದರೆ ನಿಮ್ಮ ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಹೆಚ್ಚಾಗುವುದು. ಶುಭದಿನ 04. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.